## ಕಳೆದ ಸಂಚಿಕೆಯಲ್ಲಿ



ಊರೆಲ್ಲ ಮದುವೆಗೆ ಹೋಗುವ ಸಂಭ್ರಮದಲ್ಲಿರುವಾಗ, ತ್ಯಾಗ ಮಾತ್ರ ಗುಂಪಿನ ನಡುವೆಯೂ ಒಬ್ಬಂಟಿಯಾಗಿದ್ದ. ನೆಲ ಮುಗಿಲುಗಳನ್ನು ಒಂದು ಮಾಡುವಂತೆ ಗಾಳಿ ಬೀಸಿದಾಗ, ಆ ಗಾಳಿಗೆ ತೋಟದಲ್ಲಿ ಕಾಯಿಗಳು ಬಿದ್ದಿರಬಹುದೆಂದು ತ್ಯಾಗನಿಗನ್ನಿಸಿತು. ತೋಟಕ್ಕೆ ಹೋಗಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಕಾಯಿಗಳನ್ನು ಆಯ್ದುಕೊಂಡ ತ್ಯಾಗ ಸಂತೋಷದಿಂದ ಮನೆಯತ್ತ ಹೊರಟಾಗ, ಮಲ್ಲ ಎದುರಾದ. ಕಾಯಿಗಳನ್ನು ಕದ್ದುಕೊಂಡು ಹೋಗುತ್ತಿದ್ದ ತ್ಯಾಗನನ್ನು ಹಿಡಿದು ಹೊಡೆಯತೊಡಗಿದ. ಮಲ್ಲನಿಂದ ತಪ್ಪಿಸಿಕೊಂಡು ತ್ಯಾಗ ಓಡತೊಡಗಿದರೂ, ಹುಲಿಯ ಕೈಗೆ ಸಿಕ್ಕಿಬೀಳುವ ಜಿಂಕೆಯಂತೆ ಹುಡುಗ ಸಿಕ್ಕಿಬಿದ್ದ. ಮಲ್ಲನ ಹೊಡೆತಕ್ಕೆ ತ್ಯಾಗ ಕುಸಿದುಬಿದ್ದ. ಕಣ್ಣೆದುರು ಜೀವ ಬಿಟ್ಟ ಪುಟ್ಟ ಹುಡುಗನನ್ನು ಮಲ್ಲ ನಿಕೃಷ್ಟವಾಗಿ ನೋಡುತ್ತ, ವಿಷಯ ಯಾರಿಗೂ ತಿಳಿಯಬಾರದೆಂದು ಯೋಚಿಸಿ ತೋಟದಲ್ಲಿ ಹೆಣವನ್ನು ಸುಟ್ಟುಹಾಕಿದ. ಅಮಾಯಕ ಹುಡುಗನ ದುರ್ಮರಣಕ್ಕೆ ಚಂದ್ರನಾದಿಯಾಗಿ ಇಡೀ ಪ್ರಕೃತಿಯೇ ಮರುಗಿತು. ಇತ್ತ ದ್ಯಾವಕ್ಕ ಮಗನ ಹುಡುಕಿಕೊಂಡು ಊರೆಲ್ಲ ಅಲೆದು ನಿರಾಶಳಾದಳು. ಓದಲಿಕ್ಕೆಂದು ಸಿದ್ಧಗಂಗೆಗೆ ಹೋಗಬೇಕಿದ್ದ ಹುಡುಗ ಇದ್ದಕ್ಕಿದ್ದಂತೆ ನಾಪತ್ತೆಯಾಗಿದ್ದ.

ಈ ನಿಂಗಣ್ಣನು ಅಂಗಡಿಯಿಂದ ಎರಡೆಜ್ಜೆ ಮುಂದೆ ಬಂದನು.

ಸ್ಕೂಲ್ ಮೈದಾನದ ಕಡೆಯಿಂದ ಆ ಕತ್ತಲೆಯಲ್ಲಿ ಯಾರೋ ಬರುತ್ತಿರುವಂತೆ ಕಂಡಂತಾಗಲು ಅವ್ರತ್ತ ಒಂದು ನೋಟ ಬೀರಿ ಇತ್ತ ಬರುತ್ತಿಲ್ಲ ಎನ್ನುವುದನ್ನು ಗೊತ್ತು ಮಾಡಿಕೊಂಡು ಸುತ್ತಲೂ ಒಂದು ನೋಟ ನೋಡಿ, 'ಲೇ ಶಿವ, ನೀನೇಳ್ತಿರದು ಸರಿ ಆದ್ರೆ ನಾನೊಂದು ಹೇಳ್ತೀನಿ, ಇದನ್ನ ನಿನ್ನ ಅಂಗಡಿಗೆ ಕಾಯ್ತುಂದಾಕೋರು ಯಾರೂ ಹೇಳಲ್ಲ. ಕಸುಬುದಾರನ ಗುಟ್ನ ಕಸುಬುದಾರನಿಗಲ್ದೆ, ಇನ್ನೊಬ್ಬರಿಗೆ ಬಿಟ್ಕೊಡಲ್ಲ. ಆದ್ರೆ ನೀನು ನಮ್ಮೆಡ್ಗ. ನೀನು ಕೊರಗಿದ್ರೆ ನನಿಗೆ ಏಳ್ಗೆ ಇಲ್ಲ. ನೀನು ಧೈರ್ಯವಾಗಿರ್ಲಿ ಅಂತ ಹೇಳ್ತೀನಿ. ಆ ನನ್ಮಕ್ಳು ಕಣ್ಣಿಗೆ ಎಣ್ಣೆ ಬಿಟ್ಕಂಡು ಕಾಯ್ತಾರೆ ನಿಜ. ಆದರೆ ಎಲ್ಲಿ ಕಾಯ್ತಾರೆ ಹೇಳು? ಇದು ನಿನಿಗೆ ಗೊತ್ತಿಲ್ಲ. ಅದನ್ನ ನಾನೇಳ್ತೀನಿ ಕೇಳು. ಅವರವ್ರ ತೋಟುದ್ಮನೇಲಿ ಕಾಯ್ತಾರೆ. ಕಣ್ಣಿಗೇನಾರ ಕಂಡ್ರೆ ಬ್ಯಾಟ್ರಿ ಹಾಕ್ತಾರೆ, ಶಬ್ದ ಬಂದಕಡೆ ಕೂಗಾಕ್ತರೆ, ಏನೂ ಇಲ್ಲ ಅಂದ್ರೆ ಅಲ್ಲೇ ಬೀಡಿ ಎಳೀತಾ ಎಳೀತಾ ಅಂಗೇ ಕಣ್ಣಿಗೆ ನಿದ್ದೆ ಹತ್ತಿ ಹೋಗ್ತರೆ. ಅಂತಾ ಟೈಮಲ್ಲಿ ನಾನೋಗದು. ನನ್ನೇನಿಡಿತರೆ ಅವ್ರು?' ಅಂದೋನು, ಹಿಂದಿನ ಅವನ ಅನುಭವವನ್ನು ಶಿವಣ್ಣನೊಡನೆ ಮತ್ತೆ ಹಂಚಿಕೊಳ್ಳುತ್ತಿದ್ದ.

ಇನ್ನೂ ಮಲಗಿಲ್ಲದ, ಅಂಗಡಿ ತಿಂಡಿಗಾಗಿ ರಚ್ಚೆ ಹಿಡಿದ ಮಕ್ಕಳನ್ನು ಎಳೆದುಕೊಂಡು ಬಂದ ಅವರವ್ವ ಅಪ್ಪಂದಿರು ಸಣ್ಣಪುಟ್ಟ ತಿಂಡಿ ಕೊಡಿಸುತ್ತಿದ್ದರು. ಶಿವಣ್ಣ, ಕೇಳಿದ ಸಾಮಾನನ್ನು ಕೊಡುತ್ತಾ ನಿಂಗಣ್ಣನ ಮಾತಿಗೆ ಬೆರಗಾಗುತ್ತಾ ಮಾತಿಗೆ ಮಾತಾದನು. 'ಅದು ಸರಿ ನಿಂಗಣ್ಣ, ನೀನು ಹೋಗ್ವಾಗ ಯಾವ್ದಾದ್ರೂ ಒಣ ಗರಿಮೇಲೆ ಹೆಜ್ಜೆ ಮಡಿಗ್ದೆ ಅಂತಿಟ್ಕ... ಆಗ ಅದು ಸರ್ ಅಂತ ಸದ್ದ ಮಾಡಿ ಅವರ ನಿದ್ದೆ ಅತ್ತ ಸರಿದು ಎಚ್ಚರಾದ್ರೆ? ಆಗ?' ಎಂದು ಪ್ರಶ್ನಿಸಿದ ಶಿವಣ್ಣ. ಆ ಮಾತು ಕೇಳಿ ನಕ್ಕ ನಿಂಗಣ್ಣನು, 'ನಿನ್ನ ಮಾತು ಕೇಳಿದರೆ ನಗು ಬರುತ್ತೆ ಕಳ್ಳೆ' ಅಂತಂದೋನು, ಒಂದು ಕಡ್ಡಿ ಗೀರಿ ಇನ್ನೊಂದು ದಂ ಬೀಡಿ ಎಳೆಯುತ್ತಾ ಮತ್ತೊಂದು ಸಾರಿ ಸುತ್ತಮುತ್ತ ಕಣ್ಣಾಡಿಸಿದ.

ಅಲ್ಲಿ ಆ ಬೀದೀಲೀ ಯಾರೂ ಕಣ್ಣಿಗೆ ಬೀಳಲಿಲ್ಲ, ಭಯವನ್ನು ದೂರ ಮಾಡಿದ ಹಾಗಾಯಿತು ಎಂದು ಮನಸ್ಸಿನಲ್ಲೇ ಖಾತ್ರಿ ಮಾಡಿಕೊಂಡು ಎರಡೆಜ್ಜೆ ಶಿವಣ್ಣನ ಮುಂದಕ್ಕೆ ಬಂದು, 'ಇದು ನಿಮ್ಮ ಕಾಲದ ಕಥೆಯಲ್ಲ. ಲೋ ಶಿವ... ಈ ನನ್ಮಕ್ಳ ತ್ವಾಟ ಏನ್ ನಿನ್ನಂಡ್ಗಿ ಅಗ್ಲ ಐತೇನ್ಲಾ? ಅತ್ತಾಗೊಂದ್ ಮೈಲು, ಇತ್ತಾಗೊಂದು ಮೈಲು... ಇಂಗಿರುವಾಗ ಅವರ ತೋಟದ ಮನೆ ಇರೋದು ಒತ್ತಟ್ಟಿಗೊಂದು ಮೂಲೇಲಿ. ತ್ವಾಟದ ಸುತ್ತ ನಿಂತು ಆ ತೋಟ್‌ದೊಳಗೆ ಒಂದು ನಾಯಿಯೂ ಸುಳಿಯೋಕಾಗ್ದಂಗೆ ಕಾಯಕ್ಕಾಗುತ್ತೇನು? ಅಂಗೂ ಕಾಯ್ಬೇಕು ಅಂತ ಅಂದ್ರೆ ಏನೂ ಇಲ್ಲ ಅಂತಂದ್ರೂ ತ್ವಾಟ ಕಾಯಕ್ಕೆ ಒಂದೈವತ್ತು ಜನ ಬೇಕು. ಅಂತದ್ರಲ್ಲಿ ಮಾವ, ಬಾಮೈದ, ಅಪ್ಪ, ಮಗ ಅಂತವು ಹೋಗಿ ಕಾಯ್ತವೆ. ಅಂತಾದ್ರಲ್ಲಿ ಯಾವ್ ಮೂಲೆ ಅಂತ ಕಾಯ್ತವೆ ಹೇಳು' ಅಂದು ನಿಂಗಣ್ಣ ಶಿವಣ್ಣನ ಮಾತನ್ನು ಲಘುವಾಗಿ ತೆಗೆದುಕೊಂಡ.

ಇದೇ ವೇಳೆ ಶಿವಣ್ಣನಿಗೆ ಬೇರೆಯದೇ ಸುದ್ದಿ ಇರಬಹುದು, ಆದ್ದರಿಂದಲೇ ಹೀಗೆ ಹೇಳುತ್ತಿರಬಹುದು ಎಂಬುದು ಅವನ ತಲೆಗೆ ಬರಲಿಲ್ಲ. ಶಿವಣ್ಣನ ಅಂಗಡಿಯ ಮುಂದೆ ಇವನಂತೆಯೇ ತೋಟದ ಯಜಮಾನರು ಬಂದು ಮಾತನಾಡುತ್ತಿದ್ದ ವರಸೆಗಳನ್ನು ಕೇಳಿದ್ದ ಶಿವಣ್ಣ ನೇರವಾಗಿ ಹೇಳದೆ ಸುತ್ತಿ ಬಳಸಿ ಹೇಳುತ್ತಿದ್ದ. ಕೊನೆಗೆ ಭಯ ಶಂಕೆ ಕಾಡಿ 'ನೀನು ಎಚ್ರ ತಪ್ದೆ ಉಷಾರಾಗಿ ಕೆಲ್ಸ ಮುಗಿಸ್ಕಂಡು ಬಾ' ಅಂದ.

ಅಂಗಡಿಗೆ ಬಂದು ಬೀಡಿ ಸಿಗರೇಟು ಸೇದುವ ಮಲ್ಲನ ಬಾಮೈದುನನ ಬಗ್ಗೆ ಒಂದಷ್ಟು ಹೇಳಬೇಕೆನಿಸಿತಾದರೂ ತಳವಾರನು ಬಂದುದರಿಂದ ಮಾತು ನಿಲ್ಲಿಸಿದ. ಅವನು ಅತ್ತ ಹೋದ ಮೇಲೆ ತಳವಾರ ಆ ಕತ್ತಲೆಯಲ್ಲಿ ಎಲ್ಲಾದರೂ ಇದ್ದಾನೋ ಏನೋ ಎಂಬ ಅನುಮಾನದಲ್ಲಿ ಶಿವಣ್ಣನು ನಿಂಗಣ್ಣನ ಕಿವಿಯ ಹತ್ತಿರ ಬಂದು, 'ಆ ಮಲ್ಲನ ಬಾಮೈದ ಆ ಸಿದ್ದಣ್ಣನ ಜೀವವನ್ನೇ ನುಂಗಿದ ಕಿರಾತಕ' ಎಂದ. ನಿಂಗಣ್ಣ ಆ ಮಾತಿಗೆ 'ಎಲ್ಲಿ ತಂಕ ವಿಚಾರ ಮಾಡಿದೀಯ ನೀನು, ಅನ್ನುತ್ತಾ ಸಿದ್ದಣ್ಣನ ಕೊಲೆ ನೆನಪು ಪ್ರಜ್ಞೆಗೆ ಮೂಗು ತೋರಿಸಿದಂತಾಗಿ ಮತ್ತೊಂದು ಬೀಡಿ ಕಚ್ಚಿದ.'

ಶಿವಣ್ಣ 'ಅಣ, ಈ ಶ್ರೀಧರ ನೀನಂದ್ಕಂಡಂಗಲ್ಲ. ಬಾರೀ ಉಷಾರು, ಅವನ ಕಿವಿ ಯಾವಾಗ್ಲೂ ಊರ ಬಾಗಿಲು ತೆರ್ಕಂಡಂತೆ ತೆರ್ಕಂಡಿರುತ್ತೆ. ಸಣ್ಣ ಸದ್ದು ಕೇಳಿದರೂ ಸಾಕು, ಆ ಸದ್ದು ಯಾವಕಡೆಯಿಂದ ಬರುತ್ತಿದೆ ಅಂತ ಆಲಿಸಿ ಆ ದಿಕ್ಕಲ್ಲೇ ಬಂದು ನಿನ್ನ ಏನಾರ ಮಾಡ್ಗೀಡ್ಯಾನು' ಎನ್ನುತ್ತ ಹಳೆ ಕೊಲೆಯ ನೆನಪು ಮಾಸಿ ಹೋಗುತ್ತಿರುವುದನ್ನು ಮತ್ತೆ ಕೆಣಕಿದ. ಅವನ ಮಾತಿನಿಂದ ನಿಂಗಣ್ಣನಿಗೆ ಗಾಬರಿ ಆಯಿತಾದರೂ, ತನ್ನ ಹೆದರಿಕೆಯನ್ನು ತೋರಗೊಡದೆ 'ಸುಮ್ನಿರ್ಲ ಶಿವ... ಸದ್ದು ಯಾವ ತರದ್ದು ಬರುತ್ಲೆ, ಅವನು ಅಂಗೆ ಆಲಿಸ್ಕಂಡು ಬರಕ್ಕೆ?' ಎಂದು ಪ್ರಶ್ನಿಸಿದ.

ಅವನ ಮಾತಿಗೆ ಶಿವಣ್ಣನು 'ನೀನು ಮರದಿಂದ ಕಾಯಿ ಕಿತ್ತು ನೆಲಕ್ಕಾಕ್ತೀಯಲ್ಲಾ... ಒಳ್ಳೆ ತಂಪೊತ್ತು ಧಪ್ ಧಪ್ಪನೆ ಬೀಳೋದು ಕೇಳ್ದೇ ಅಂಗೇ ಇರುತ್ತಾ? ನೀನು ಮರದಿಂದ ಕೆಳಗೆ ಇಳಿಯೋ ಹೊತ್ಗೆ ತೋಟ ಕಾಯವ್ರು ನಾಕೈದ್ ಜನ ಬಂದು ಕಾಯ್ಕ ಕೂತವರು ನೀನು ಇಳಿತಿದ್ದಂಗೆ ಬಂದು ಇಲಿ ಇಡ್ದಂಗೆ ಹಿಡಿದರೆ' ಅನ್ನುತ್ತಿದ್ದಂತೆ ನಿಂಗಣ್ಣನು, 'ನಿಜಸಂಗತಿಯನ್ನು ಈಗ ಹೇಳುತ್ತೇನೆ ಕೇಳು: ಇಲ್ಲೇ ನನ್ನ ಚಾಣಾಕ್ಷತನ ಇರೋದು' ಎಂದು ಕುಂಟುತ್ತಾ ಎರಡು ಮೂರು ಹೆಜ್ಜೆ ಮುಂದೆ ಬಂದು ಚಿಟಿಕೆ ಹೊಡೆದು, 'ಲೇ ನಾನು ಮರದಿಂದ ಕಾಯಿ ಕೆಳೀಕೆ ಆಕಲ್ಲ. ಮರದಮೇಲೆ ಕುಂತು ಗುದಿ ಹಾಕಿ ಹೆಗ್ಲಲ್ಲಿ ಇಟ್ಕಂಡು ಮರದಿಂದ ಕೆಳಗೆ ಇಳ್ದೆ ಅಂದ್ರೆ ಯಾರಿಗೆ ಕಾಯಿ ಸೇರ್ಬೇಕು ಅವ್ರ ಮನೆ ಹತ್ರಾನೇ ನನ್ನ ಹೆಗ್ಲಿಂದ ಗುದಿ ಕೆಳಗಿಳಿಸೋದು' ಎಂದು ಅವನು ಅನುಭವಿಸಿದ ಆನಂದವನ್ನು ಅವನ ಬಳಿ ಇರಿಸಿಕೊಳ್ಳಲಾಗದೆ ಎರಡು ಮೂರು ನಗೆ ನಕ್ಕೋನು ಶಿವಣ್ಣನ ಹತ್ತಿರಕ್ಕೆ ಬಂದು ಹೇಳಿದ: 'ಬೆಳಿಗ್ಗೆ ತೋಟಕ್ಕೋಗಿ ನೋಡ್ದಾಗ್ಲೇ ಆ ಮರದಲ್ಲಿ ಕಾಯೋಗವೆ ಅಂತ ತಿಳಿಯೋದು. ಆಗ ಒಬ್ರಿಗೆ ಗೊತ್ತಾದ್ರೆ ಒಬ್ರಿಗೆ ಹೇಳಲ್ಲ. ತ್ವಾಟ ಕಾಯೋರ್ ಇಬ್ರಿಗೂ ಗೊತ್ತಾದ್ರೆ ಮನೆಗೆ ಬಂದು ಹೆಂಡ್ತಿ ಮಕ್ಳಿಗೆ ಹೇಳೋದೇ ಇಲ್ಲ.' ಅಷ್ಟು ಹತ್ತಿರದಿಂದ ಇವರ ಯೋಗ್ಯತೆಯನ್ನು ನೋಡಿದವನಂತೆ ಶಿವಣ್ಣನಿಗೆ ನಿಂಗಣ್ಣ ಹೇಳಿದ.

ನಿಂಗಣ್ಣನ ಮಾತಿಗೆ ಸುಮ್ಮನಾಗದ ಶಿವಣ್ಣ 'ಮನೆಗೆ ಬಂದು ಯಾಕೇಳಲ್ಲ?' ಅಂತ ಕೇಳಿದ. 'ಮನಿಗೆ ಬಂದು ಯಾಕೇಳಲ್ಲಾ ಅಂದ್ರೆ, ನೀವಿದ್ರೂ ಮರ್ದಾಗೆ ಕಾಯೋಗ್ತವೆ ಅಂದ್ರೆ ಅಲ್ಲೇನ್ ನೀವ್ ಕಾಯದು? ಎಲ್ಲಾ ಬುತ್ತಿ ಕಟ್ಕಂಡು ತೋಟ ಕಾಯ್ತೀವಿ ತೋಟ ಕಾಯ್ತೀವಿ ಅಂತ ಹೋಗಿ ಅಲ್ಲೇನ್ ಮಾಡ್ತೀರ? ಅಂತ ಮನೆ ಮಕ್ಕೆಲ್ಲ ಮೇಲ್